ದಿನಾಂಕ 09.10.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- ಶ್ರೀ ಎಂ.ಡಿ. 1 ಮತ್ತು 2 ಪ್ರತಿವಾದಿ ಪರ ವಕೀಲರಿಂದಃ

ದೊಡ್ಡರಾವಳಯ್ಯ ರವರು ನಾಯಕ ಜನಾಂಗಕ್ಕೆ ಸೇರಿದವರಾಗಿದ್ದು ನಾನು ಗೌಡ ಜನಾಂಗಕ್ಕೆ ಸೇರಿದವರಾಗಿರುತ್ತೇವೆ. ದೇವಸ್ಥಾನದಲ್ಲಿ ಪೂಜೆಯನ್ನು ಮಾಡುತ್ತಿದ್ದರು ನಾಯಕ ಜನಾಂಗದವರು ಎಂದರೆ ಸರಿ. ಇಲ್ಲಿಯವರಗೂ ನಾಯಕ ಜನಾಂಗದವರನ್ನು ಬಿಟ್ಟು ಸದರಿ ದೇವಾಲಯದಲ್ಲಿ ಬೇರೆ ಯಾವುದೇ ಜನಾಂಗದವರು ಪೂಜೆ ಮಾಡಿರುವ ಬಗ್ಗ ನನಗೆ ಗೊತ್ತಿರುವುದಿಲ್ಲ. ಆ ದೇವಸ್ಥಾನಕ ಸಂಪ್ರದಾಯಕ ಪ್ರಕಾರ ನಾಯಕ ಜನಾಂಗದವರೇ ಪೂಜೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನಿಪಿ-1 ವಿಲ್ ನ್ನು ಅವರು ಬರೆದ ದಿನಾಂಕದಂದೇ ನನಗೆ ತಿಳಿದಿರುತ್ತದೆ. ಸದರಿ ವಿಲ್ ನ್ನು ಬರೆಯಲು ದೊಡ್ಡ ರಾವಳಯ್ಯ ಹಾಗೂ ನನ್ನ ಮಕ್ಕಳಾದ ವಸಂತಕುಮಾರ್ ಹಾಗೂ ನಾಗರಾಜ ಹಾಗೂ ನಾನು ಸಹ ಹೋಗಿರುತ್ತೇವೆ. ಸದರಿ ವಿಲ್ ನ್ನು ಬರೆಯುವಾಗ ನಾನು ಹಾಗೂ ನನ್ನ ಮಕ್ಕಳು ಅಲ್ಲೇ ಇದ್ದೆವು. ಸದರಿ ವಿಲ್ ನ್ನು ನೋಂದಣಿ ಕಚೇರಿಯಲ್ಲಿ ಬರೆದಿರುತ್ತಾರೆ. ಸದರಿ ವಿಲ್ ನ್ನು ಬರೆಯುವ ಸಮಯದಲ್ಲಿ ದೊಡ್ಡರಾವಳಯ್ಯ ರವರು ನನ್ನ ಜೊತೆಯಲ್ಲೇ ವಾಸಿಸುತ್ತಿದ್ದರು. ದೊಡ್ಡರಾವಳಯ್ಯ ರವರು ಸದರಿ ವಿಲ್ ಗೆ ತಮ್ಮ ಹೆಬ್ಬೆಟ್ಟನ್ನು ಹಾಕುವ ಮೊದಲು ಸದರಿ ದಾಖಲೆಯ ಸಾಕ್ಷಿಗಳು ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಾಕ್ಷಿಯು ನನಗೆ ಪರಿಚಿತರಾಗಿರುತ್ತಾರೆ. ಸಾಕ್ಷಿಯು ಮುಂದುವರೆದು ಅವರುಗಳು ನಮ್ಮ ಊರಿನವರೇ ಆಗಿರುತ್ತಾರೆ. ಸದರಿ ಸಾಕ್ಷಿಗಳು ಸಹಿ ಹಾಕಿದ ನಂತರ ನನ್ನ ಯಜಮಾನರಾದ ದೊಡ್ಡರಾವಳಯ್ಯ ರವರು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಅದರ ನಂತರ ನೋಂದಣಿ ಕಚೇರಿಯಲ್ಲಿ ನಿಪಿ-1 ರ ಸಾಕ್ಷಿಗಳು ಮತ್ತೆ ಸಹಿ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ಸಾಕ್ಷಿಗಳು ಆ ಸಂದರ್ಭದಲ್ಲಿ ಅಲ್ಲೇ ಇದ್ದರು ಎಂದು ನುಡಿಯುತ್ತಾರೆ. ನಿಪಿ-1 ನ್ನು ಬರೆಯುವಾಗ ಅದರಲ್ಲಿ ಏನನ್ನು ಬರೆಯುತ್ತಿದ್ದರು ಎಂದು ನನಗೆ ಗೊತ್ತಾಗುತ್ತಿರುತ್ತದೆ. ಸದರಿ ದಾಖಲೆಯನ್ನು ಬರೆಯುವಾಗ ದೇವಸ್ಥಾನದ ಪೂಜೆಯನ್ನು ನಾಯಕ ಜನಾಂಗದವರು ಮಾಡುತ್ತಿದ್ದು ನನ್ನ ಹೆಸರಿಗೆ ಯಾವ ಕಾರಣಕ್ಕಾಗಿ ಬರೆಯುತ್ತಿದ್ದೀರಾ ಎಂದು ಕೇಳಲಿಲ್ಲವೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದರ ಅಗತ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ನ್ನು ಬರೆಯುವಾಗ ನೀವು ದೊಡ್ಡರಾವಳಯ್ಯ ರವರ 2ನೇ ಹೆಂಡತಿ ಎಂದು ಗೊತ್ತಾಗಿರುತ್ತದೋ ಇಲ್ಲವೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮೊದಲನೇ ಹೆಂಡತಿ, ಎರಡನೇ ಹೆಂಡತಿ ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಅವರ ಹೆಂಡತಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೊಡ್ಡರಾವಳಯ್ಯ ರವರ ಜೊತೆ ನಾನು ಇರುವಾಗ ನನಗೆ ಮೊದಲನೇ ಮಗ ಹುಟ್ಟಿದ ಹಂತರ ಅವರಿಗೆ

ಮೊದಲನೇ ಹೆಂಡತಿ ಮತ್ತು ಮಕ್ಕಳು ಇರುವ ವಿಚಾರ ನನಗೆ ತಿಳಿದಿರುತ್ತದೆ. ನಿಪಿ-1 ನ್ನು ಬರೆದ ನಂತರ ಸದರಿ ವಿಲ್ ನಮ್ಮ ಬಳಿಯೇ ಇದ್ದಿರುತ್ತದೆ.

ನನ್ನ ಯಜಮಾನರಾದ ದೊಡ್ಡರಾವಳಯ್ಯ ರವರು ಮನೆಯಲ್ಲೇ ತೀರಿಕೊಂಡಿರುತ್ತಾರೆ. ನಾವು ನಾಯಕ ಜನಾಂಗಕ್ಕೆ ಪರಿವರ್ತನೆ ಆದ ಬಗ್ಗೆ ಜಾತಿ ಪ್ರಮಾಣ ಪತ್ರ ಇರುತ್ತದೆ. ದೇವಸ್ಥಾನದ ಪೂಜೆಯನ್ನು ಪ್ರತಿವಾದಿಗಳೇ ನಡೆಸಿಕೊಂಡು ಹೋಗುತ್ತಿದ್ದು ನಮಗೆ ಸದರಿ ಪೂಜೆಯನ್ನು ಮಾಡಲು ಅವಕಾಶ ಕೊಟ್ಟಿರುವುದಿಲ್ಲ ಎಂಬ ಕಾರಣಕ್ಕಾಗಿ ಈ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ. ಈ ದಾವೆಯನ್ನು ಹೂಡಿದ ನಂತರ ಮಧ್ಯಂತರ ಅರ್ಜಿಯ ಆದೇಶದಂತೆ ಒಂದೂವರೆ ತಿಂಗಳು ನಾವು ಹಾಗೂ ಒಂದೂವರೆ ತಿಂಗಳು ಪ್ರತಿವಾದಿಗಳು ಪೂಜೆ ಮಾಡಿಕೊಂಡು ಹೋಗಬೇಕು ಎಂದು ಆದೇಶವಾಗಿದ್ದು ತದ ನಂತರ ನಾವು ಪೂಜೆಯನ್ನು ಮಾಡಿಕೊಂಡು ಬರುತ್ತಿದ್ದೆವು ಎಂದರೆ ಸರಿ. ನಂತರ ನನ್ನ ದೊಡ್ಡ ಮಗ ತೀರಿಕೊಂಡಿದ್ದು ಚಿಕ್ಕ ಮಗ ಪೂಜೆಯನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಅನುಮತಿಯನ್ನು ಕೋರಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಿಪಿ-1 ರಲ್ಲಿರುವ ಸಂಗತಿಗಳನ್ನು ನಾವೆಲ್ಲರೂ ಸಹ ಭಾಗಿಗಳಾಗಿ ಬರೆದುಕೊಂಡಿರುತ್ತೇವೆ. ಸದರಿ ವಿಲ್ ನ್ನು ಬರೆಯಲು ದೊಡ್ಡರಾವಳಯ್ಯ ರವರಿಗೆ ಯಾವುದೇ ಇಚ್ಛೆ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ವಿಲ್ ನ್ನು ಮಾದೇಶ ಶೆಟ್ಟಿ ಎನ್ನುವವರು ಬರೆದಿರುತ್ತಾರೆ. ಅವರು ಈಗ ಬದುಕಿರುವುದಿಲ್ಲ. ರಾಚ ಎನ್ನುವವರು ಸದರಿ ವಿಲ್ ಗೆ ಮೊದಲ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ನಾನು ನನಗೆ ಅನುಕೂಲವಾಗುವ ರೀತಿಯಲ್ಲಿ ಭಾಗಶ: ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಸಂತೋಷ ಕೊಠಾರಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ